# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1550

ಉತ್ತರಿಸ ಬೇಕಾದ ದಿನಾಂಕ : 21.03.2025

ವಿಷಯ : ಜೆ.ಜೆ.ಎಂ ಯೋಜನೆಗೆ ವಿಶ್ವಬ್ಯಾಂಕ್‌ನಿಂದ ಆರ್ಥಿಕ ನೆರವು ಪಡೆಯುತ್ತಿರುವ ಕುರಿತು.

| | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಗೆ ರಾಜ್ಯ ಸರ್ಕಾರದಿಂದ ಪಾವತಿಸಲು ನಿಗದಿಪಡಿಸಿರುವ ಮೊತ್ತವೆಷ್ಟು; | ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಗೆ ರಾಜ್ಯ ಸರ್ಕಾರದಿಂದ ಪಾವತಿಸಲು ನಿಗದಿಪಡಿಸಿರುವ ಮೊತ್ತ ರೂ.32,181.73 ಕೋಟಿಗಳು. |
| ಆ) | ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಗೆ ವಿಶ್ವಬ್ಯಾಂಕ್‌ನಿಂದ ಪಡೆಯಲಾಗುತ್ತಿರುವ ಸಾಲದ ಮೊತ್ತವೆಷ್ಟು? | ರಾಜ್ಯದ ಗ್ರಾಮೀಣ ಜನವಸತಿಗಳಿಗೆ ಸುಸ್ಥಿರ ಕುಡಿಯುವ ನೀರು ವ್ಯವಸ್ಥೆಗಾಗಿ ವಿಶ್ವಬ್ಯಾಂಕ್ ನೆರವಿನಡಿ ಮೊತ್ತ ರೂ. 2904.00 ಕೋಟಿಗಳನ್ನು ಪಡೆಯಲಾಗುತ್ತಿದೆ. |
| ಇ) | ಸದರಿ ಸಾಲದ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗುತ್ತಿದೆ; | ರಾಜ್ಯದಲ್ಲಿ ಗ್ರಾಮೀಣ ಜನವಸತಿಗಳಿಗೆ<br>• ಸುರಕ್ಷಿತ ಸುಸ್ಥಿರ ಕುಡಿಯುವ ನೀರನ್ನು ಒದಗಿಸಲು,<br>• ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಮೇಲ್ವಿಚಾರಣೆ,<br>• ಸಮುದಾಯದ ವರ್ತನೆಯ ಬದಲಾವಣೆ,<br>• ಸಾಮರ್ಥ್ಯ ವೃದ್ಧಿ,<br>• ಇಲಾಖೆಯಿಂದ ಸೃಜಿಸಲಾದ ಹಾಗೂ ಸೃಜಿಸಲಾಗುವ ಸ್ವತ್ತುಗಳ ಸುಸ್ಥಿರ ನಿರ್ವಹಣೆಯಲ್ಲಿ ಸಮುದಾಯದ ಜವಾಬ್ದಾರಿ<br>• ಸಮುದಾಯದ ಪಾಲ್ಗೊಳ್ಳುವಿಕೆಯೊಂದಿಗೆ ಸ್ವಂತಿಕೆ ಮನೋಭಾವ ಹಾಗೂ ವಿವಿಧ ಹಂತದ ಸಂಸ್ಥೆಗಳನ್ನು ಬಲಪಡಿಸುವ ಉದ್ದೇಶಗಳಿಂದ,<br>ಕರ್ನಾಟಕ ಸುಸ್ಥಿರ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಐದು ವರ್ಷದ ಅವಧಿಯಲ್ಲಿ (2023-2028) ಅನುಷ್ಠಾನಗೊಳಿಸುವ ಸಲುವಾಗಿ ಪಡೆಯಲಾಗುತ್ತದೆ. |

| | | |
|---|---|---|
| ಈ) | ವಿಶ್ವಬ್ಯಾಂಕ್‌ನಿಂದ ಪಡೆಯಲಾಗುತ್ತಿರುವ ಸಾಲದ ಮೊತ್ತದಲ್ಲಿ ಯಾವ ಮಾದರಿಯ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತದೆ; | ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸುಸ್ಥಿರ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮವು ಫಲಿತಾಂಶ ಆಧಾರಿತ ಯೋಜನೆಯಾಗಿದ್ದು (Programme for Results), ಸಾಧನೆ ಸಂಬಂಧಿತ ಸೂಚಕಗಳ (DLIs-Disbursement Linked Indicators) ಆಧಾರದ ಮೇಲೆ ವಿಶ್ವ ಬ್ಯಾಂಕ್ ಕರ್ನಾಟಕ ಸರ್ಕಾರಕ್ಕೆ ಹಣಕಾಸು ನೆರವು ನೀಡುತ್ತದೆ. |
| ಉ) | ಯೋಜನೆಯ ಒಟ್ಟು ಮೊತ್ತದ ಶೇ.45ರಷ್ಟು ಅನುದಾನವನ್ನು ಪಾವತಿ ಮಾಡುತ್ತಿರುವ ರಾಜ್ಯ ಸರ್ಕಾರಕ್ಕೆ ವಿಶ್ವಬ್ಯಾಂಕಿನ ನೆರವು ಅಗತ್ಯವಿತ್ತೇ? | ಹೌದು.<br>ಜಲ ಜೀವನ ಮಿಷನ್ ಯೋಜನೆಯಡಿ ಕಲ್ಪಿಸಿರುವ ಮೂಲಭೂತ ಸೌಕರ್ಯಗಳ ಸುಸ್ಥಿರತೆ ಕಾಪಾಡಲು ಹಾಗೂ ನಿರಂತರ ಶುದ್ಧೀಕರಿಸಿದ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅಗತ್ಯವಿರುವ ಕಾರ್ಯಾಚರಣೆ ಹಾಗೂ ನಿರ್ವಹಣಾ ವ್ಯವಸ್ಥೆಗಳನ್ನು ಸಜ್ಜುಗೊಳಿಸಲು ಅನುದಾನದ ಅಗತ್ಯವಿರುವುದರಿಂದ ವಿಶ್ವ ಬ್ಯಾಂಕ್‌ನ ನೆರವು ಪಡೆಯಲಾಗುತ್ತಿದೆ. |

**(ಕಡತ ಸಂಖ್ಯೆ: ಗ್ರಾಅಪ/ಗ್ರಾಕುನೀ&ನೈಇ/171/ಮುಇಂ/ತಾಂತ್ರಿಕ/2024-25)**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಸಚಿವರು